Received 17/03/2021 3.10 PM

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

ವಿಷಯ: 2020-21 ನೇ ಸಾಲಿಗೆ ಸರ.ವಿ.ರಾಮನ್ ವಿದ್ಯಾರ್ಥಿ ವೇತನಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ/64/ಹೆಚ್‌ಪಿಸಿ/2020, ದಿನಾಂಕ:29.06.2020. (ಸರ್ಕಾರದ ಅನುದಾನ ಹಂಚಿಕೆ ಆದೇಶ)

2. ಸರ್ಕಾರದ 3 ಮತ್ತು 4 ನೇ ಕಂತಿನ ಅನುದಾನ ಬಿಡುಗಡೆ ಆದೇಶ ಸಂಖ್ಯೆ:ಇಡಿ/115/ಹೆಚ್‌ಪಿಸಿ/2020, ದಿನಾಂಕ:15.03.2021.

*******

**ಪ್ರಸ್ತಾವನೆ:-**

2020-21 ನೇ ಸಾಲಿನಲ್ಲಿ ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಲೆಕ್ಕಶೀರ್ಷಿಕೆ:2202-03-107-1-10-117 ರಡಿಯಲ್ಲಿ ರೂ.500.00 ಲಕ್ಷ ಹಂಚಿಕೆಯಾಗಿದ್ದು. ಉಲ್ಲೇಖ 2 ರಂತೆ ಮೂರು ಮತ್ತು ನಾಲ್ಕನೆ ತ್ರೈಮಾಸಿಕ ಕಂತಿನ ಅನುದಾನ ರೂ.250.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಅನುದಾನ ಹಂಚಿಕೆಗಾಗಿ 06 ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಂದ ಸರ್.ಸಿ.ವಿ. ರಾಮನ್ ಮತ್ತು ಸಂಚಿಹೊನ್ನಮ್ಮ ವಿದ್ಯಾರ್ಥಿವೇತನದ ಮಂಜೂರಾತಿಗಾಗಿ ಅನುದಾನ ಕೋರಿ ಸಲ್ಲಿಸಿದ ಪ್ರಸ್ತಾವನೆ ಅನ್ವಯ ಉಲ್ಲೇಖ 2 ರಲ್ಲಿ ಬಿಡುಗಡೆಯಾಗಿರುವ ರೂ.250.00 ಲಕ್ಷಗಳಲ್ಲಿ 06 ಪ್ರಾದೇಶಿಕ ಜಂಟಿ ನಿರ್ದೇಶಕರ ಬೇಡಿಕೆ ಮೊತ್ತದ ಅನುಪಾತದ ಆಧಾರದ ಮೇಲೆ 2020-21 ನೇ ಸಾಲಿಗೆ ಸರ್.ಸಿ.ವಿ.ರಾಮನ್ ಮತ್ತು ಸಂಚಿಹೊನ್ನಮ್ಮ ನೂತನ ಮತ್ತು ನವೀಕರಣ ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳಿಗೆ ಮಂಜೂರು ಮಾಡುವ ಸಲುವಾಗಿ ಅನುದಾನ ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ: ಕಾಶಿಇ/12/ಅನುದಾನ ಬಿಡುಗಡೆ/2020-21/ವಿವೇ, ದಿನಾಂಕ: 17.03.2021.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2020-21 ನೇ ಸಾಲಿಗೆ ಸರ್.ಸಿ.ವಿ.ರಾಮನ್, ಸಂಚಿಹೊನ್ನಮ್ಮ ನವೀಕರಣ ಮತ್ತು ನೂತನ ವಿದ್ಯಾರ್ಥಿವೇತನಗಳನ್ನು ಮಂಜೂರು ಮಾಡಲು ಸರ್ಕಾರದಿಂದ ಮೂರು ಮತ್ತು ನಾಲ್ಕನೆ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಿರುವ ಒಟ್ಟು ರೂ.250.00 ಲಕ್ಷಗಳ ಅನುದಾನದಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು 06 ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಸರ್.ಸಿ.ವಿ.ರಾಮನ್ ಮತ್ತು ಸಂಚಿಹೊನ್ನಮ್ಮ ವಿದ್ಯಾರ್ಥಿ ವೇತನಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆ. ಪ್ರಾದೇಶಿಕ ಜಂಟಿ ನಿರ್ದೇಶಕರವಾರು ಬಿಡುಗಡೆ ಮಾಡಿರುವ ಅನುದಾನವನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ 1 ರಿಂದ 6 ರಲ್ಲಿ ಸೂಚಿಸಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನದ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| "ಸರ್.ಸಿ.ವಿ. ರಾಮನ್ ವಿದ್ಯಾರ್ಥಿವೇತನ" | | | | |
| 1 | 2202-03-107-1-10-117 (P) (GEN) | 58.60 | 1172 | ಪ್ರತಿ ವಿದ್ಯಾರ್ಥಿಗೆ ತಲಾ ರೂ.5000/- ಗಳಂತೆ |
| "ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ" | | | | |
| 2 | 2202-03-107-1-10-117 (P) (GEN) | 91.68 | 4584 | ಪ್ರತಿ ವಿದ್ಯಾರ್ಥಿನಿಗೆ ತಲಾ ರೂ.2000/- ಗಳಂತೆ |
| | ಒಟ್ಟು ಮೊತ್ತ | **150.28** | 5756 | |

(ರೂ.ಒಂದು ಕೋಟಿ ಐವತ್ತು ಲಕ್ಷದ ಇಪ್ಪತ್ತೆಂಟು ಸಾವಿರಗಳು ಮಾತ್ರ)

2020-21 ನೇ ಸಾಲಿಗೆ ನವೀಕರಣ ವಿದ್ಯಾರ್ಥಿವೇತನ ಮಂಜೂರು ಮಾಡುವಾಗ ಅನುಸರಿಸಬೇಕಾದ ನಿಬಂಧನೆಗಳು

1. ಮೇಲ್ಕಂಡಂತೆ ಬಿಡುಗಡೆಯಾಗಿರುವ ಅನುದಾನವನ್ನು ಸರ್ಕಾರಿ ಕಾಲೇಜುಗಳಿಗೆ ಆದ್ಯತೆ ಮೇರೆಗೆ ಬಳಕೆ ಮಾಡಿಕೊಂಡು ಉಳಿದ ಅನುದಾನವನ್ನು ಖಾಸಗಿ ಅನುದಾನಿತ ಕಾಲೇಜುಗಳಿಗೆ ಬಿಡುಗಡೆ ಮಾಡಲು ಸೂಚಿಸಲಾಗಿದೆ.
2. ಮೊದಲಿಗೆ 2018-19 ಮತ್ತು 2019-20 ನೇ ಸಾಲಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾದ ವಿದ್ಯಾರ್ಥಿಗಳಲ್ಲಿ ಅರ್ಹ ವಿದ್ಯಾರ್ಥಿಗಳಿಗೆ (ದ್ವಿತೀಯ ಮತ್ತು ತೃತೀಯ ಪದವಿ ತರಗತಿ) ಸ್ವಯಂ ನವೀಕರಿಸಿ (Automatic Renewal) 2020-21 ನೇ ಸಾಲಿಗೆ ಸಂಚಿಹೊನ್ನಮ್ಮ ಮತ್ತು ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲು ನಿಯಮಗಳನ್ವಯ ಕ್ರಮಕ್ಕೈಗೊಳ್ಳುವುದು.
3. ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಒಳಪಡುವ ಎಲ್ಲಾ ಜಿಲ್ಲೆಗಳ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳಿಂದ 2020-21 ನೇ ಸಾಲಿಗೆ ಸ್ವೀಕೃತವಾದ ನೂತನ ನವೀಕರಣ ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾವಾರು, ಗರಿಷ್ಠ ಅಂಕದಿಂದ ಕನಿಷ್ಠ ಅಂಕದಂತೆ ಮೆರಿಟ್ ಆಧಾರದ ಮೇಲೆ (In descending order) ಪಟ್ಟಿಯನ್ನು ಸಿದ್ಧಪಡಿಸಿ ವಿದ್ಯಾರ್ಥಿವೇತನ ಮಂಜೂರಾತಿಗೆ ಕ್ರಮವಹಿಸುವುದು.
4. ಜಿಲ್ಲಾವಾರು ಮೆರಿಟ್ ಆಧಾರದ ಪಟ್ಟಿಯನ್ನು ತಯಾರಿಸಿದ ನಂತರ ಬಿಡುಗಡೆ ಮಾಡಿರುವ ಅನುದಾನವನ್ನು ಎಲ್ಲಾ ಜಿಲ್ಲೆಗಳ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ (ಅನುಪಾತದಂತೆ) ವಿದ್ಯಾರ್ಥಿವೇತನ ಮಂಜೂರು ಮಾಡುವುದು.
5. ಆಯ್ಕೆಗೊಂಡ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಕಾಲೇಜುವಾರು ಪಟ್ಟಿ ತಯಾರಿಸಿ ವಿದ್ಯಾರ್ಥಿವೇತನ ಬಿಡುಗಡೆಗೆ ಕ್ರಮ ಕೈಗೊಳ್ಳುವುದು.
6. ಸಂಚಿಹೊನ್ನಮ್ಮ ಮತ್ತು ಸಿ.ವಿ.ರಾಮನ್ ವಿದ್ಯಾರ್ಥಿವೇತನಕ್ಕಾಗಿ ತಮಗೆ ಬಿಡುಗಡೆ ಮಾಡಿರುವ ಅನುದಾನಗಳನ್ನು ಖಜಾನೆ-2ರ ಮುಖಾಂತರ ಫಲಾನುಭವಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡುವುದು. ವಿದ್ಯಾರ್ಥಿವೇತನ ಮೊತ್ತಗಳು ಜಮಾ ಆಗಿರುವ ಬಗ್ಗೆ ಖಚಿತಪಡಿಸಿಕೊಂಡು 62ಬಿ ಪಡೆದು ಒಟ್ಟು ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರಗಳನ್ನು ಈ ಕಛೇರಿಗೆ ಸಲ್ಲಿಸುವುದು.
7. ವಿದ್ಯಾರ್ಥಿವೇತನ ಮಂಜೂರು ಮಾಡುವ ಸಮಯದಲ್ಲಿ ಪಾರದರ್ಶಕತೆ ಕಾಪಾಡುವುದು ಹಾಗೂ ಯಾವುದೇ ದೂರಿಗೆ (ವಿದ್ಯಾರ್ಥಿ/ಪೋಷಕರಿಂದ) ಆಸ್ಪದವಿಲ್ಲದಂತೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.
8. ಯಾವುದೇ ಕಾರಣಕ್ಕೂ ಅನುದಾನ ವ್ಯಪಗತ (Lapse) ಆಗದಂತೆ ಮುಂಜಾಗ್ರತೆ ವಹಿಸುವುದು.

ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಸಂಚಿಹೊನ್ನಮ್ಮ ಮತ್ತು ಸರ್.ಸಿ.ವಿ.ರಾಮನ್ ನವೀಕರಣ & ನೂತನ ವಿದ್ಯಾರ್ಥಿವೇತನಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿ ನೀಡಲಾಗಿದೆ. ಬಿಡುಗಡೆ ಮಾಡಿರುವ ಅನುದಾನಗಳನ್ನು ಬಳಸಿಕೊಂಡು, ವಿದ್ಯಾರ್ಥಿವೇತನವಾರು ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಗೆ ಈ ಆದೇಶದೊಂದಿಗೆ ಲಗತ್ತಿಸಲಾದ ನಮೂನೆಯಲ್ಲಿ ರವಾನಿಸಲು ಸೂಚಿಸಿದೆ. ಮೇಲ್ಕಂಡ ಲೆಕ್ಕಶೀರ್ಷಿಕೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ಅಧ್ಯರ್ಪಿಸದೆ (should not surrender) ಹಾಗೂ ಮೇಲ್ಕಂಡ ಯಾವುದೇ ಅನುದ್ಧಾನ ವ್ಯಪಗತ (Lapse)ವಾಗದಂತೆ ಅಗತ್ಯ ಕ್ರಮ ವಹಿಸಲು ಮತ್ತೊಮ್ಮೆ ಸೂಚಿಸಿದೆ.
(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು.

ಇವರಿಗೆ :

1. ಜಂಟಿ ನಿರ್ದೇಶಕರುಗಳು, ಪ್ರಾದೇಶಿಕ ಕಛೇರಿ ಬೆಂಗಳೂರು/ಮೈಸೂರು/ ಮಂಗಳೂರು/ ಶಿವಮೊಗ್ಗ /ಧಾರವಾಡ/ ಕಲಬುರಗಿ.
2. ಮ್ಯಾನೇಜರ್, ಹಣ ಮತ್ತು ಪಾವತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇವರಿಗೆ ಸದರಿ ಅನುದಾನಗಳನ್ನು ಮೇಲ್ಕಂಡ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಅನುಬಂಧದಲ್ಲಿರುವಂತೆ ಖಜಾನೆ-2ರ ಮುಖಾಂತರ ಬಿಡುಗಡೆ ಮಾಡಲು ಅಗತ್ಯಕ್ರಮಕ್ಕೈಗೊಳ್ಳುವಂತೆ ಸೂಚಿಸಿದೆ.

ಪ್ರತಿಯನ್ನು ಶೀಘ್ರ ಕ್ರಮಕ್ಕಾಗಿ ಕಳುಹಿಸಿದೆ.

1. ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು ಹಾಗೂ ಎಲ್ಲಾ ಪ್ರಾದೇಶಿಕ ಕಛೇರಿಗಳು – ಮಾಹಿತಿಗಾಗಿ.
2. ಉಪನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು- ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
3. ಮ್ಯಾನೇಜರ್/ಅಧೀಕ್ಷಕರು, ಯೋಜನಾ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು.
4. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.
5. ಕಛೇರಿ ಪ್ರತಿ.

ಆದೇಶ ಸಂಖ್ಯೆ: ಕಾಶಿಇ/12/ಅನುದಾನ ಬಿಡುಗಡೆ/2020-21/ವಿವೇ, ದಿನಾಂಕ: 17.03.2021.ಸಂಬಂಧಿಸಿದಂತೆ

## ಅನುಬಂಧ – 1

### ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ಡಿ.ಡಿ.ಓ ಗಳಿಗೆ C O MODE/D O MODE ವಾರು ಬಿಡುಗಡೆ ಮಾಡಲಾಗುತ್ತಿರುವ ಮೊದಲ ತ್ರೈಮಾಸಿಕ ಕಂತಿನ ಅನುದಾನದ ಮೊತ್ತ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|---|---|
| ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ 2020-21 | | | | | | |
| 1 | 2202-03-107-1-10-117 (P) (GEN) | 23.10 | C O MODE | 23.10 | 462 | ತಲಾ ರೂ.5,000/- |
| | | | D O MODE | – | – | |
| | ಒಟ್ಟು ಮೊತ್ತ = (ರೂ.ಇಪ್ಪತ್ತಮೂರು ಲಕ್ಷದ ಹತ್ತು ಸಾವಿರ ಮಾತ್ರ) | 23.10 | | 23.10 | 462 | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2020-21 | | | | | | |
| 2 | 2202-03-107-1-10-117 (P) (GEN) | 24.06 | C O MODE | 20.20 | 1010 | ತಲಾ ರೂ.2,000/- |
| | | | D O MODE | 3.86 | 193 | |
| | ಒಟ್ಟು ಮೊತ್ತ = (ರೂ.ಇಪ್ಪತ್ತನಾಲ್ಕು ಲಕ್ಷದ ಆರು ಸಾವಿರ ಮಾತ್ರ) | 24.06 | | 24.06 | 1203 | |

(ಸಹಿ)
ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ: ಕಾಶಿಇ/12/ಅನುದಾನ ಬಿಡುಗಡೆ/2020-21/ವಿವೇ, ದಿನಾಂಕ: 17.03.2021.ಸಂಬಂಧಿಸಿದಂತೆ

## ಅನುಬಂಧ – 2

ಪ್ರಾದೇಶಿಕ ಜಂಟಿ ನಿರ್ದೇಶಕರು, ಮೈಸೂರು

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ಡಿ.ಡಿ.ಓ ಗಳಿಗೆ C O MODE/D O MODE ವಾರು ಬಿಡುಗಡೆ ಮಾಡಲಾಗುತ್ತಿರುವ ಮೊದಲ ತ್ರೈಮಾಸಿಕ ಕಂತಿನ ಅನುದಾನದ ಮೊತ್ತ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|---|---|
| | ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ 2020-21 | | | | | |
| 1 | 2202-03-107-1-10-117 (P) (GEN) | 11.30 | C O MODE | 11.30 | 226 | ತಲಾ ರೂ.5,000/- |
| | | | D O MODE | – | – | |
| | ಒಟ್ಟು ಮೊತ್ತ = (ರೂ.ಹನ್ನೊಂದು ಲಕ್ಷದ ಮೂವತ್ತು ಸಾವಿರ ಮಾತ್ರ) | 11.30 | | 11.30 | 226 | |
| | ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2020-21 | | | | | |
| 2 | 2202-03-107-1-10-117 (P) (GEN) | ------ | C O MODE | ----- | ----- | ತಲಾ ರೂ.2,000/- |
| | | ------ | D O MODE | ----- | ----- | |
| | ಒಟ್ಟು ಮೊತ್ತ = (ರೂ.ಮಾತ್ರ) | ----- | | ------- | ----- | |

ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ: ಕಾಶಿಇ/12/ಅನುದಾನ ಬಿಡುಗಡೆ/2020-21/ವಿವೇ, ದಿನಾಂಕ: 17.03.2021ರ ಸಂಬಂಧಿಸಿದಂತೆ

## ಅನುಬಂಧ – 3

### ಪ್ರಾದೇಶಿಕ ಜಂಟಿ ನಿರ್ದೇಶಕರು ಮಂಗಳೂರು

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ಡಿ.ಡಿ.ಓ ಗಳಿಗೆ C O MODE/D O MODE ವಾರು ಬಿಡುಗಡೆ ಮಾಡಲಾಗುತ್ತಿರುವ ಮೊದಲ ತ್ರೈಮಾಸಿಕ ಕಂತಿನ ಅನುದಾನದ ಮೊತ್ತ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|---|---|
| ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ 2020-21 | | | | | | |
| 1 | 2202-03-107-1-10-117 (P) (GEN) | 9.50 | C O MODE | 1.10 | 22 | ತಲಾ ರೂ.5,000/- |
| | | | D O MODE | 8.40 | 168 | |
| ಒಟ್ಟು ಮೊತ್ತ = (ರೂ ಒಂಬತ್ತು ಲಕ್ಷದ ಐವತ್ತು ಸಾವಿರ ಮಾತ್ರ) | | | | 9.50 | 190 | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2020-21 | | | | | | |
| 2 | 2202-03-107-1-10-117 (P) (GEN) | 5.12 | C O MODE | 3.54 | 177 | ತಲಾ ರೂ.2,000/- |
| | | | D O MODE | 1.58 | 79 | |
| ಒಟ್ಟು ಮೊತ್ತ = (ರೂ ಐದು ಲಕ್ಷದ ಹನ್ನೆರಡು ಸಾವಿರ ಮಾತ್ರ) | | | | 5.12 | 256 | |

ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ: ಕಾಶಿಇ/12/ಅನುದಾನ ಬಿಡುಗಡೆ/2020-21/ವಿವೇ, ದಿನಾಂಕ: 17.03.2021.ಸಂಬಂಧಿಸಿದಂತೆ

## ಅನುಬಂಧ – 4

### ಪ್ರಾದೇಶಿಕ ಜಂಟಿ ನಿರ್ದೇಶಕರು, ಶಿವಮೊಗ್ಗ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ಡಿ.ಡಿ.ಓ ಗಳಿಗೆ C O MODE/D O MODE ವಾರು ಬಿಡುಗಡೆ ಮಾಡಲಾಗುತ್ತಿರುವ ಮೊದಲ ತ್ರೈಮಾಸಿಕ ಕಂತಿನ ಅನುದಾನದ ಮೊತ್ತ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|---|---|
| ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ 2020-21 | | | | | | |
| 1 | 2202-03-107-1-10-117 (P) (GEN) | 14.70 | C O MODE | 14.70 | 294 | ತಲಾ ರೂ.5,000/- |
| | | | D O MODE | – | – | |
| ಒಟ್ಟು ಮೊತ್ತ = (ರೂ.ಹದಿನಾಲ್ಕು ಲಕ್ಷದ ಎಪ್ಪತ್ತು ಸಾವಿರ ಮಾತ್ರ) | | | | 14.70 | 294 | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2020-21 | | | | | | |
| 2 | 2202-03-107-1-10-117 (P) (GEN) | 22.90 | C O MODE | 5.16 | 258 | ತಲಾ ರೂ.2,000/- |
| | | | D O MODE | 17.74 | 887 | |
| ಒಟ್ಟು ಮೊತ್ತ = (ರೂ.ಇಪ್ಪತ್ತೆರಡು ಲಕ್ಷದ ತೊಂಬತ್ತು ಸಾವಿರ ಮಾತ್ರ) | | | | 22.90 | 1145 | |

ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ: ಕಾಶಿಇ/12/ಅನುದಾನ ಬಿಡುಗಡೆ/2020-21/ವಿವೇ, ದಿನಾಂಕ: 17.03.2021ರ.ಸಂಬಂಧಿಸಿದಂತೆ

## ಅನುಬಂಧ – 5

ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ಡಿ.ಡಿ.ಓ ಗಳಿಗೆ C O MODE/D O MODE ವಾರು ಬಿಡುಗಡೆ ಮಾಡಲಾಗುತ್ತಿರುವ ಮೊದಲ ತ್ರೈಮಾಸಿಕ ಕಂತಿನ ಅನುದಾನದ ಮೊತ್ತ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|---|---|
| ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ 2020-21 | | | | | | |
| 1 | 2202-03-107-1-10-117 (P) (GEN) | | C O MODE | --- | --- | ತಲಾ ರೂ.5,000/- |
| | | | D O MODE | --- | --- | |
| ಒಟ್ಟು ಮೊತ್ತ = (ರೂ.ಮಾತ್ರ) | | --- | | --- | --- | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2020-21 | | | | | | |
| 2 | 2202-03-107-1-10-117 (P) (GEN) | 9.00 | C O MODE | 4.00 | 200 | ತಲಾ ರೂ.2,000/- |
| | | | D O MODE | 5.00 | 250 | |
| ಒಟ್ಟು ಮೊತ್ತ = (ರೂ. ಒಂಬತ್ತು ಲಕ್ಷಗಳು ಮಾತ್ರ) | | | | 9.00 | 450 | |

ಕಾಲೇಜು ಶಿಕ್ಷಣ ನಿರ್ದೇಶಕರು

ಆದೇಶ ಸಂಖ್ಯೆ: ಕಾಶಿಇ/12/ಅನುದಾನ ಬಿಡುಗಡೆ/2020-21/ವಿವೇ, ದಿನಾಂಕ: 17.03.2020ಕ್ಕೆ ಸಂಬಂಧಿಸಿದಂತೆ

## ಅನುಬಂಧ – 6

ಪ್ರಾದೇಶಿಕ ಜಂಟಿ ನಿರ್ದೇಶಕರು, ಕಲಬುರಗಿ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಲೆಕ್ಕ ಶೀರ್ಷಿಕೆ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ಡಿ.ಡಿ.ಓ ಗಳಿಗೆ C O MODE/D O MODE ವಾರು ಬಿಡುಗಡೆ ಮಾಡಲಾಗುತ್ತಿರುವ ಮೊದಲ ತ್ರೈಮಾಸಿಕ ಕಂತಿನ ಅನುದಾನದ ಮೊತ್ತ | ಬಿಡುಗಡೆ ಮಾಡುತ್ತಿರುವ ಅನುದಾನ ಮೊತ್ತ | ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|---|---|
| ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ 2020-21 | | | | | | |
| 1 | 2202-03-107-1-10-117 (P) (GEN) | | C O MODE | – | – | ತಲಾ ರೂ.5,000/- |
| | | | D O MODE | – | – | |
| ಒಟ್ಟು ಮೊತ್ತ = (ರೂ.ಮಾತ್ರ) | | | | | | |
| ಸಂಚಿ ಹೊನ್ನಮ್ಮ ವಿದ್ಯಾರ್ಥಿವೇತನ 2020-21 | | | | | | |
| 2 | 2202-03-107-1-10-117 (P) (GEN) | 30.60 | C O MODE | 16.20 | 810 | ತಲಾ ರೂ.2,000/- |
| | | | D O MODE | 14.40 | 720 | |
| ಒಟ್ಟು ಮೊತ್ತ = (ರೂ.ಮೂವತ್ತು ಲಕ್ಷದ ಅರವತ್ತು ಸಾವಿರ ಮಾತ್ರ) | | 30.60 | | 30.60 | 1530 | |

ಕಾಲೇಜು ಶಿಕ್ಷಣ ನಿರ್ದೇಶಕರು